ಮುಂಡಾಸು ಸುತ್ತಿದ್ದ, ಮಂದಹಾಸ ಬೀರುವ, ಹಣ್ಣು ಹಣ್ಣು ಮುದುಕನ ಚಿತ್ರ. ಹಿನ್ನೆಲೆ ಅಸ್ಪಷ್ಟವಾಗಿತ್ತು.

"ನಿನಗೇನು ಅನ್ನಿಸುತ್ತೆ, ಕರಮಚಂದ್?" ನಾನು ಕೇಳಿದೆ.

"ಮುದುಕರೂ ಫೋಟೊ ಅಂದ ತಕ್ಷಣ, ನೋಡು, ಹೇಗೆ ನಗೆ ಹರಡಿಸ್ಕೋತಾರೆ ಮುಖದಲ್ಲಿ!" ಚಟಾಕಿ ಹಾರಿಸಿದ ಕರಮಚಂದ. ಆ ಫೋಟೊದಲ್ಲಿ ಆತಂಕ ಹುಟ್ಟಿಸುವಂತಹದೇನು ಕಾಣಲಿಲ್ಲ. ಆ ವ್ಯಕ್ತಿ ಯಾರು? ಆತನ ಚಿತ್ರ ಕಂಡು ರಚನ್ ಯಾಕೆ ಗಾಬರಿಗೊಂಡ?

"ಇನ್ನೂ ಏನಾದ್ರೂ ನಿನ್ಗೆ ಹೊಳೀತಿಲ್ವೆ?"

"ಇದು ಅತ್ಯಾಧುನಿಕ ಪ್ರಿಂಟರ್ ಬಳಸಿ ತೆಗೆದ ಫೋಟೊ. ಎಪ್ಸನ್ ಅಥವಾ ಎಚ್ ಪಿ ಕಲರ್ ಪ್ರಿಂಟರ್. ಇದರ ಬಣ್ಣಗಳ ಛಾಯೆ ನೋಡ್ದಾಗ ಅವರೆರಡರಲ್ಲಿ ಒಂದು ಅಂತ ಖಚಿತವಾಗಿ ಊಹಿಸಬಹುದು. ಬೂದು ಬಣ್ಣದ ಛಾಯೆ ಇರೋದು ಇವರೆಡರಲ್ಲಿ ಮಾತ್ರ. ಕೆನಾನ್ ಪ್ರಿಂಟರಿನಲ್ಲಿ ಹಳದಿ ಛಾಯೆ ಕಾಣಬಹುದು. ಆ ವ್ಯತ್ಯಾಸ ಗೊತ್ತಾಗಬೇಕಾದ್ರೆ ನೀನು ಎರಡೂ ಪ್ರಿಂಟರಿನಿಂದ ತೆಗೆದ ಚಿತ್ರಗಳನ್ನು ಜೊತೆಗಿರಿಸಿ, ಹೋಲಿಸಿದಾಗ ತಿಳಿಯುತ್ತೆ. ಅದಿರಲಿ, ಮೇಡಮ್, ನಿಮ್ಗೆ ಈ ಫೋಟೊದಲ್ಲಿರುವವರು ಪರಿಚಯವೇ?"

ಇಲ್ಲವೆಂಬಂತೆ ಸುಭಾಷಿಣಿ ಕತ್ತು ಅಡ್ಡವಾಗಿ ಅಲ್ಲಾಡಿಸಿದಳು. ಆ ಫೋಟೊ ಇರಿಸಿದ್ದ ಕವರನ್ನು ಕರಮಚಂದ ಎಚ್ಚರಿಕೆಯಿಂದ ಪರಿಶೀಲಿಸಿದ. ಗಾಢವಾದ ಕಂದು ಬಣ್ಣದ ಲಕೋಟೆಯ ಮೂಲೆಯಲ್ಲಿ 'ಕೀರ್ತಿ ಸ್ಟೇಶನರ್ಸ್' ಎಂದು ಚಿಕ್ಕ ಅಕ್ಷರಗಳಲ್ಲಿ ಬರೆದಿತ್ತು. ಕಿರು ನಕ್ಕ ಕರಮಚಂದ ಮನೆಯೊಳಗೆ ಹುಡುಕಾಟ ಆರಂಭಿಸಿದ. ಪಕ್ಕದ ಕೋಣೆಯಲ್ಲಿ ಕಪಾಟಿನಲ್ಲಿ ಓರಣವಾಗಿ ಜೋಡಿಸಿಟ್ಟ ಪುಸ್ತಕಗಳು. ಅದರ ಪಕ್ಕ ಬಟ್ಟೆಗಳನ್ನು ಇರಿಸಿದ ವಾರ್ಡ್ ರೋಬ್. ಮೇಜಿನ ಮೇಲೆ ಹಳೆಯ ಆಲ್ಬಂ ಇತ್ತು. ಕರಮಚಂದ ಅದರೊಳಗೆ ಚುರುಕಿನ ದೃಷ್ಟಿ ಹರಿಸಿದ. ಮೇಜಿನ ಸೆಳೆಖಾನೆ ಎಳೆದಾಗ ಸಣ್ಣ ಚೀಟಿಯೊಂದು ಗೋಚರಿಸಿತು. ಅದು ಇಸ್ತ್ರಿ ಅಂಗಡಿಯವನ ಬಿಲ್ಲು. ಅದರಲ್ಲಿ ಒಂದು ವಾರದ ಹಿಂದಿನ ದಿನಾಂಕ, ಅಂದ್ರೆ ಕ್ಯಾಂಪಿಗೆ ಅಂತ ಹೋದ ಹಿಂದಿನ ದಿನದ್ದು, ನಮೂದಾಗಿತ್ತು.

"ರಚನ್ ಕೋಟು ಧರಿಸೋದು ಬಹಳ ಕಮ್ಮಿ, ಅಲ್ವೆ?"

ಕರಮಚಂದನ ಪ್ರಶ್ನೆಗೆ ಆಕೆ ಚಕಿತಗೊಂಡಂತೆ ಕಂಡಳು. ಹೌದೆನ್ನುವಂತೆ ತಲೆ ಮೇಲೂ ಕೆಳಗೂ ಆಡಿಸಿದಳು.

"ಈ ಆಲ್ಬಂನಲ್ಲಿ ರಚನ್‌ನ ಹಲವು ಫೋಟೊಗಳಿವೆ. ಕೆಲವು ಇತ್ತೀಚಿಗೆ ತೆಗೆದವುಗಳೆನ್ನುವುದು ಅದರಲ್ಲಿ ನಮೂದಾದ ದಿನಾಂಕಗಳಿಂದ ಸ್ಫುಟವಾಯ್ತು. ರಚನ್ ಕಾಣೆಯಾಗಿದ್ದು ಗೊತ್ತಾದಾಗ ಸಾಮಾಜಿಕ ಜಾಲತಾಣಗಳಲ್ಲಿ ಸಣ್ಣ ಹುಡುಕಾಟ ನಡೆಸಿದ್ದೆ. ಎಲ್ಲೂ ಆತ ಕೋಟುಧಾರಿಯಾಗಿದ್ದನ್ನ ಕಂಡಂತಿಲ್ಲ. ಆದ್ರೆ ಮೊನ್ನೆ ರಚನ್ ಕೋಟು ಕೊಂಡು ಹೋಗಿದ್ದ, ಅಲ್ವೆ?"

ಆಕೆಯ ಮೊಗದಲ್ಲಿ ಅಚ್ಚರಿ ಈಗ ನಿಚ್ಚಳವಾಗಿತ್ತು.

"ನೋಡಿ, ಲಾಂಡ್ರಿಯವನ ಬಿಲ್ಲು. ಕೋಟು ಡ್ರೈವಾಶ್ ಮಾಡಿದ್ದು. ಇಲ್ಲಿ ನೋಡಿ, ವಾರ್ಡ್ ರೋಬ್‌ನಲ್ಲಿ ಕೋಟಿನ ಹ್ಯಾಂಗರ್ ಖಾಲಿ ನೇತಾಡ್ತಿದೆ... ಅಂದ್ರೆ ರಚನ್ ಕೋಟು ತೆಗೆದುಕೊಂಡು ಹೋಗಿರಲೇಬೇಕು!"